#ಯುನೈಟೆಡ್ ಬೆಂಗಳೂರು

ಗೆ, ದಿನಾಂಕ–20–06–2019

ಅಪರ ನಿಬಂಧಕರು, ವಿಚಾರಣೆಗಳು–1
ಮಾನ್ಯ ಲೋಕಾಯುಕ್ತ ಕಛೇರಿ
ಎಂ.ಎಸ್.ಬಿಲ್ಡಿಂಗ್, ಡಾ. ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001

ಮಾನ್ಯರೇ,

ವಿಷಯ : **ಸುಬ್ರಮಣ್ಯಪುರ ಕೆರೆ**ಯ ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ
ಉಲ್ಲೇಖ : ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ Comp/Lok/BCD-2515/2018.

1. ದಿನಾಂಕ 18–06–2019ರಂದು ಸುಬ್ರಮಣ್ಯಪುರ ಕೆರೆಗೆ ಯುನೈಟೆಡ್ ಬೆಂಗಳೂರು ಸದಸ್ಯರು ಭೇಟಿ ನೀಡಿ ಕೆರೆ ಅಭಿವೃದ್ಧಿಯನ್ನು ಪರಿಶೀಲಿಸಲಾಯಿತು. ಸ್ಥಿತಿಗತಿ ವಿವರಿಸುವ ಫೋಟೋಗಳನ್ನು ಲಗತ್ತಿಸಲಾಗಿದೆ.

2. ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ಸುಬ್ರಮಣ್ಯಪುರ ಕೆರೆಯು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಹಳ್ಳಿ ಸರ್ವೇ ನಂ 64 ಮತ್ತು ಮಾರಸಂದ್ರ ಗ್ರಾಮದ ಸರ್ವೇ ನಂ 6 ರಲ್ಲಿ ಒಟ್ಟು 25 ಎಕರೆ 6 ಗುಂಟೆ ವಿಸ್ತೀರ್ಣವನ್ನು ಹೊಂದಿದೆ.

3. ಪರೀಶಿಲನೆಯಲ್ಲಿ ಗಮನಿಸಿದಂತೆ ಕೇವಲ 6 ಎಕರೆ ವಿಸ್ತೀರ್ಣದಲ್ಲಿ ಮಾತ್ರ ಕೆರೆಯನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಕಂಡುಬರುತ್ತಿದೆ. ಕೆರೆಯಲ್ಲಿರುವ ಒತ್ತುವರಿಯನ್ನು ತೆರವುಗೊಳಿಸದೆ ಅಭಿವೃದ್ಧಿ ಪಡಿಸಲಾಗುತ್ತಿದೆ. ಒತ್ತುವರಿದಾರರಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆಗಳನ್ನು ಈಗಾಗಲೇ ನಿರ್ಮಿಸಲಾಗಿದ್ದು, ಒತ್ತುವರಿದಾರರನ್ನು ಶೀಘ್ರ ಸ್ಥಳಾಂತರಿಸಲು ತಾವು ದಿನಾಂಕ 05–02–2019 ರಂದು ಮತ್ತು 12–12–2109 (Comp/Lok/BCD-2515/2018) ಆದೇಶ ನೀಡಿರುತ್ತೀರಿ. ಆದರೆ ಇದುವರೆಗೂ ಒತ್ತುವರಿದಾರರನ್ನು ಸ್ಥಳಾಂತರಿಸಿರುವುದಿಲ್ಲ. ಹಾಗಾಗಿ ಶೀಘ್ರ ಒತ್ತುವರಿದಾರರನ್ನು ಸ್ಥಳಾಂತರಿಸಬೇಕಾಗಿ ವಿನಂತಿಸುತ್ತೇವೆ.

4. ಕೆರೆಗೆ ಕೊಳಚೆ ನೀರು ಹರಿದು ಬರುತ್ತಿರುವುದನ್ನು ತಡೆಗಟ್ಟಬೇಕಾಗಿ ಮತ್ತು ಮಳೆ ನೀರು ಮಾತ್ರ ಕೆರೆಗೆ ಹರಿದು ಬರುವಂತೆ ಮಾಡಬೇಕಿದೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

ಹೆಚ್ ಎಸ್ ದೊರೆಸ್ವಾಮಿ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು

ಎನ್ ಆರ್ ಸುರೇಶ್
ಸಂಚಾಲಕರು, ಯುನೈಟೆಡ್ ಬೆಂಗಳೂರು